Member's representation.

† ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಸ್ವಾಮಿ, ರಾಜ್ಯದಲ್ಲಿ ಒಂದು ರೀತಿಯ ಕೋಲಾಹಲವನ್ನುಂಟುಮಾಡಿರುವ ಮಂತ್ರಿಮಂಡಲದ ಗಾತ್ರವನ್ನು, ಕಡಮೆ ಮಾಡುವ ವಿಚಾರದಲ್ಲಿ ರಾಜ್ಯದ ಮುಖ್ಯಮಂತ್ರಿಯವರು ದೆಹಲಿಯಿಂದ ಬಂದ ತಕ್ಷಣ ಪತ್ರಿಕೆಗಳಲ್ಲಿ ಮಂತ್ರಿಮಂಡಲದ ಗಾತ್ರವನ್ನು ಕಡಮೆ ಮಾಡುತ್ತೇವೆಂಬ ಮಾತನ್ನಾಡಿದ್ದಾರೆಂದು ಪ್ರಕಟವಾಗಿದೆ. ಈ ಮಂತ್ರಿಮಂಡಲ ಈ ಶಾಸನ ಸಭೆಗೆ ಜವಾಬ್ದಾರಿಯುತವಾಗಿದೆ. ಈ ಸಭೆಯ ಅಧಿವೇಶನ ನಡೆಯುತ್ತಿರುವಾಗ ಮಾನ್ಯ ಮುಖ್ಯ ಮಂತ್ರಿಯವರು ಈ ಸಭೆಯನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ. ಯಾವಾಗ ಮಂತ್ರಿಮಂಡಲದ ಸಂಖ್ಯೆಯನ್ನು ಕಡಮೆ ಮಾಡುತ್ತಾರೆ, ಎಷ್ಟು ಜನರನ್ನು ನಿವೃತ್ತಿಗೊಳಿಸುತ್ತಾರೆ ಎಂಬ ವಿಚಾರಗಳ ಬಗೆಗೆ ದೇಶದಲ್ಲಿ ಧಾರಾಕಾರವಾಗಿ ಊಹಾಪೋಹ ನಡೆಯುತ್ತಿದೆ. ಈ ಒಂದು ಸಮಸ್ಯೆಯ ಬಗ್ಗೆ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟು ಈ ಸಭೆಗೆ ನಿಖರವಾದ ತಮ್ಮ ನಿಲುವನ್ನು ವ್ಯಕ್ತಪಡಿಸಿ ಈ ಊಹಾಪೋಹಗಳಿಗೆಲ್ಲಕ್ಕೂ ವಿರಾಮ ಕೊಡಬೇಕೆಂದು ಹೇಳಲಿಚ್ಛಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಮಾನ್ಯ ಶ್ರೀ ಕೃಷ್ಣ ಅವರು ಏನು ದೇಳಿದರೋ ಅದನ್ನು .. ..

Mr. SPEAKER.—The Hon'ble Member should not rise unless I call upon him. I did not call upon him.

ಶ್ರೀ ಎಸ್. ಗೋಪಾಲಗೌಡ.—ನನ್ನನ್ನು ಕರೆಯಿರಿ, ಏನು ತೊಂದರೆ?

Mr. SPEAKER.—The Hon'ble Member must ask for that earlier. On the other hand, he is taking for granted certain things!

ಶ್ರೀ ಎಸ್. ಗೋಪಾಲಗೌಡ.—ಒಂದೇ ಒಂದು ವಾಕ್ಯವನ್ನು ಹೇಳುತ್ತೇನೆ. ಇಡೀ ಮಂತ್ರಿಮಂಡಲವನ್ನು ಕಳವಳಕ್ಕೀಡುಮಾಡಿರುವ ಈ ಸಮಸ್ಯೆಯನ್ನು ಬೇಗ ಪರಿಹಾರ ಮಾಡದಿದ್ದರೆ ಸರ್ಕಾರದ ಕೆಲಸ ಕಾರ್ಯಗಳು ಸರಿಯಾಗಿ ನಡೆಯುವುದಿಲ್ಲ. ಶ್ರೀಮತಿ ಇಂದಿರಾ ಗಾಂಧಿಯವರು ಐದು ಜನ ಮಂತ್ರಿಗಳು ಐದು ಜನ ಉಪ-ಮಂತ್ರಿಗಳು ಇದ್ದರೆ ಸಾಕೆಂದು ಹೇಳಿದರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಈಗ ಒಂಬತ್ತು ಜನ ಮಂತ್ರಿಗಳೂ, ಮೂರು ಜನ ಉಪಮಂತ್ರಿಗಳೂ ಸಾಕೆಂಬ ಅಭಿಪ್ರಾಯ ಬಂದಿರುವುದರಿಂದ, ಈಗಿನ ಮಂತ್ರಿಮಂಡಲದಿಂದ ಯಾರು ಯಾರು ನಿವೃತ್ತರಾಗಬೇಕೆಂಬುದನ್ನು ಮುಖ್ಯ ಮಂತ್ರಿಗಳು ಸೂಚಿಸದೆ ಹೋದರೆ, ಕೆಲಸಕಾರ್ಯಗಳು ಸುಸೂತ್ರವಾಗಿ ನಡೆಯಲು ಆತಂಕವಾಗುತ್ತದೆ.

———.

Reduction in the size of Cabinet—Statement by Chief Minister.

† ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಸ್ವಾಮಿ, ಶ್ರೀಮಾನ್ ಕೃಷ್ಣ ಅವರು ದೇಶದಲ್ಲಿ ಅಲ್ಲೋಲ ಕಲ್ಲೋಲವಾಗಿದೆ, ಕೋಲಾಹಲವಾಗಿದೆ ಎಂದು ಹೇಳಿದರು. ಅಂಥಾದ್ದು ಎಲ್ಲಿಯೂ ಕಂಡು ಬಂದಿಲ್ಲ. ಕೋಲಾಹಲ ಅವರ ಮನಸ್ಸಿನಲ್ಲಿ ಆಗಿರಬಹುದು; ಅದೇಕೋ ಗೊತ್ತಿಲ್ಲ. ಶ್ರೀಮಾನ್ ಗೋಪಾಲಗೌಡರಿಗೆ ಊಹಾಶಕ್ತಿ ಬಹಳ ಚೆನ್ನಾಗಿದೆ. ಅವರು ಸಾಹಿತಿಗಳು, ಸಾಕಷ್ಟು ಊಹೆಮಾಡಿ ಹೇಳುತ್ತಾರೆ, ಚೆನ್ನಾಗಿ ಹೇಳುತ್ತಾರೆ. ಅವರು ಹೇಳಿದುದೆಲ್ಲ ಊಹೆಗೊಳಪಟ್ಟದ್ದೇ ಏನಾ ಅದರಲ್ಲಿ ನಿಜಾಂಶವಿಲ್ಲ. ಹಣಕಾಸಿನ ಮಂತ್ರಿಗಳು ಹೀಗೆ ಹೇಳಿದ್ದಾರೆಂದು ಹೇಳಿದರು. ಅದು ಊಹೆ ಮಾತ್ರವಲ್ಲ, ಸುಳ್ಳು, ಹೇಳಿದ್ದಾರೆಂದು ಅವರೇ ಹೇಳಿದ್ದಾರೆ. ಆದಕಾರಣ ಅದಕ್ಕೆ ಯಾರೂ ಬೆಲೆ ಕೊಡಬೇಕಾಗಿಲ್ಲ. ಸುಳ್ಳು ಎಂದಮೇಲೆ, ಯಾರು ಹೇಳಿದರೆಂದು ಪತ್ರಿಕೆಗಳಲ್ಲಿ ಬಂತೋ ಅವರೇ ಹೇಳಿಲ್ಲವೆಂದ ಮೇಲೆ ಇನ್ನೇನು? ಯಾವ ಅದೇಶವೂ ಮೇಲಿನಿಂದ ಬಂದಿಲ್ಲ. ಕೆಲವು ಕಡೆ ಮಂತ್ರಿಮಂಡಲವನ್ನು ಕಡಮೆ ಮಾಡಬಹುದೆಂದು ಅಲ್ಲಲ್ಲಿ ಹೇಳಿದ್ದಾರೆ. ನನ್ನ ಮಂತ್ರಿಮಂಡಲ ಪ್ರಾರಂಭವಾದಾಗಿನಿಂದಲೂ ಕೆಲವರು ಈ ಪಲ್ಲವಿ ಹೇಳುತ್ತಿದ್ದಾರೆ. ಕಡಮೆ ಮಾಡಬೇಕೆ, ಬೇಡವೆ ಎನ್ನುವ ವಿಚಾರವನ್ನು ತೀರ್ಮಾನ ಮಾಡುವುದು ನನಗೆ ಬಿಟ್ಟದ್ದು; ಅದು ನನ್ನ ವಿವೇಚನೆಗೆ ಬಿಟ್ಟದ್ದು. ಮಂತ್ರಿಮಂಡಲ ಒಂದು ರೀತಿಯಲ್ಲಿ ಈ ಸಭೆಯ ಅಭಿಪ್ರಾಯಕ್ಕೆ ಒಳಪಟ್ಟಿದ್ದರೂ, ಮಂತ್ರಿಮಂಡಲ ರಚನೆ ಮಾಡುವುದೂ, ಅದರಲ್ಲಿ ಎಷ್ಟು ಜನರಿರಬೇಕೆಂಬುದನ್ನು ನಿರ್ಧಾರ ಮಾಡುವುದೂ ನಾಯಕನಿಗೆ ಬಿಟ್ಟಿರುವ ವಿಷಯ. ಆದುದರಿಂದ ಈ ವಿಚಾರದಲ್ಲಿ ನಾನು